# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ-೦೪, ಭೂತರಾಮನಹಟ್ಟಿ, ಬೆಳಗಾವಿ -೫೯೧೧೫೬

E-mail: rcukannada@gmail.com Website: WWW.rcub.ac.in

## ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ


ಪತ್ರ ಸಂ: ರಾಚವಿ/ಬೆಳಗಾವಿ/ಶಾಕಭಾಅಸಂ/2019-20/ ದಿನಾಂಕ: 10-01-2020

ಕನ್ನಡ ವಿಷಯದ ಪಿಎಚ್.ಡಿ ಆಯ್ಕೆಯ ಮೌಖಿಕ ಪರೀಕ್ಷೆಗೆ ಹಾಜರಾಗುವ ಕುರಿತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಗೆ ಪಿಎಚ್.ಡಿ ಅಧ್ಯಯನಕ್ಕೆ ಅರ್ಜಿ ಸಲ್ಲಿಸಿ ಮೌಖಿಕ ಪರೀಕ್ಷೆಗೆ ಅರ್ಹರಾಗಿದ್ದೀರಿ. ವಿಶ್ವವಿದ್ಯಾಲಯದ ಪಿಎಚ್.ಡಿ ನಿಯಮಾವಳಿಗಳ ಪ್ರಕಾರ ತಾವು ಮೌಖಿಕ ಪರೀಕ್ಷೆಗೆ ಎಲ್ಲ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕಾಗಿರುತ್ತದೆ. ಸದರಿ ಮೌಖಿಕ ಪರೀಕ್ಷೆಯು ದಿನಾಂಕ: 13-01-2020 ಮತ್ತು 14-01-2020 ಗಳಂದು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ನಿರ್ದೇಶಕರ ಕೊಠಡಿಯಲ್ಲಿ ನಡೆಯಲಿದೆ. ಅದರ ವೇಳಾಪಟ್ಟಿಯು ಈ ಕೆಳಗಿನಂತಿದೆ.

| ಕ್ರ.ಸಂ | ಮೌಖಿಕ ಪರೀಕ್ಷೆಗಳು ನಡೆಯುವ ವಿದ್ಯಾರ್ಥಿಗಳ ವಿವರ | ದಿನಾಂಕ |
|---|---|---|
| 1 | ಜೆಆರ್ಎಫ್/ನೆಟ್/ಸ್ಲೆಟ್ ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳು | 13-01-2020<br>ಬೆಳಗಿನ 10.00 ಗಂಟೆಯಿಂದ |
| 2 | ವಿಶ್ವವಿದ್ಯಾಲಯವು ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದುಕೊಂಡ ಅಭ್ಯರ್ಥಿಗಳು | 14-01-2020<br>ಬೆಳಗಿನ 10.00 ಗಂಟೆಯಿಂದ |

ತಾವು ಸರ್ಕಾರಿ ನೌಕರರಾಗಿದ್ದಲ್ಲಿ ಸಕ್ಷಮ ನೇಮಕಾತಿ ಪ್ರಾಧಿಕಾರದಿಂದ ಮೌಖಿಕ ಪರೀಕ್ಷೆಗೆ ಹಾಜರಾಗುವ ಕುರಿತು ಹಾಗೂ ಪಿಎಚ್.ಡಿ ಅಧ್ಯಯನ ನಡೆಸಲು ಅನುಮತಿ ಕುರಿತು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವಂತೆ ತಿಳಿಸಲಾಗಿದೆ. ಖಾಸಗಿ ಆಡಳಿತ ಮಂಡಳಿಗಳಲ್ಲಿ ನೌಕರರಾಗಿ ನೇಮಕವಾಗಿದ್ದ ಸಂದರ್ಭದಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿಗಳಿಂದ ಸದರಿಯವರು ನಮ್ಮಲ್ಲಿ ಖಾಯಂ ಹಾಗೂ ಪೂರ್ಣಕಾಲಿಕ ನೌಕರರಾಗಿದ್ದು, ಅವರ ಪಿಎಚ್.ಡಿ ಅಧ್ಯಯನಕ್ಕೆ ಎಲ್ಲಾ ರೀತಿಯ ಸಹಕಾರವನ್ನು ನೀಡಲಾಗುವುದೆಂದು ನಿರಾಕ್ಷೇಪಣಾ ಪತ್ರವನ್ನು ಹಾಜರುಪಡಿಸಲು ತಿಳಿಸಿದೆ.

ತಾವು ಮೌಖಿಕ ಪರೀಕ್ಷೆಗೆ ಹಾಜರಾಗುವುದಕ್ಕೆ ವಿಶ್ವವಿದ್ಯಾಲಯ/ಅಧ್ಯಯನ ಸಂಸ್ಥೆಯಿಂದ ಪ್ರಯಾಣ ಭತ್ಯೆ ಮತ್ತು ಇತರೆ ಯಾವುದೇ ಭತ್ಯೆ ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುವುದಿಲ್ಲ.

ಸಹಿ/-

ಮುಖ್ಯಸ್ಥರು

ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾ.ಚ.ವಿ, ಬೆ.